# ಸಂಡೇ

'ಸಂಡೇ' ನೀನು ಕರ್ದಾಗೆಲ್ಲ
ಬಾರಪ್ಪಾ ಬಾರೋ;
ವಾರಕ್ಕೊಮ್ಮೆ ಬರ್ತೀಯಲ್ಲ
ಯಾಕಪ್ಪಾ ಹೀರೊ?
ಬೆನ್ನಿಗಂಟೆ ನಿಂಗೂ ಕೂಡ
ಕೆಲ್ಸಾ ಉಂಟೇನು?
ಬಿಟ್ಟಂದ್ರ ಅಪ್ಪಂದಲ್ಲಿ
ಹೋಗೋ ಗಂಟೇನು?

ದಿನಾ ಸ್ಕೂಲ್ಗೆ ಹೋಗೋದಂದ್ರೆ
ಎಂಥಾ ಫಜೀತಿ!
ರಾಶಿ ರಾಶಿ ಹೋಂವರ್ಕೆಲ್ಲ
ಹಂಗೇ ಕೂತೈತಿ!

ಮೈ ಗಾಳಿ ಆಡಿಸ್ಕೊಂಡು
ಬರ್ತಾ ಇರ್ತೀಯಾ!
ನಮ್ಮನ್ನೆಲ್ಲ ನೋಡ್ಕೊಂಡು
ನಗ್ತಾ ಇರ್ತೀಯಾ!

ಸ್ಕೂಲಿಗಂತ ಹೋಗೋದಿದ್ರ
ಬುದ್ಧೀ ಬೆಳೀತಿತ್ತು;
ನಮ್ಮ ಕಷ್ಟ ಏನೂ ಅಂತ
ನಿಂಗೂ ತಿಳೀತಿತ್ತು!

**ರಾಜಶೇಖರ ಕುಕ್ಕುಂದಾ**

ಕಲೆ: ಸಂತೋಷ್ ಸಸಿಹಿತ್ಲು

